Reg. No. | | | | | | | | | |

# BASKAL 282/BSWKAL 282/HRDKAL 282

**Choice Based Credit System IV Semester B.A./B.S.W./B.A. (HRD) Degree Examination, September 2022**
**(2021 – 22 Batch Onwards)**
**KANNADA LANGUAGE**

Time : 3 Hours Max. Marks : 80

I. ಕೆಳಗಿನವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ದ್ರೌಪದಿಯನ್ನು ಸಭೆಗೆ ಎಳೆದು ತರುವ ದುಶ್ಯಾಸನನ ಚಿತ್ರಣ ಮತ್ತು ಪಾಂಡವರ ಪ್ರತಿಕ್ರಿಯೆ ಹೇಗಿತ್ತು ? ವಿವರಿಸಿ.

**ಅಥವಾ**

ಧರ್ಮವು ಸಿದ್ದಯ್ಯನಿಗೆ ಮುಳುವಾದ ಬಗೆಯನ್ನು 'ಕತ್ತೆ ಮತ್ತು ಧರ್ಮ' ಕವಿತೆ ಒಡಮೂಡಿಸಿದ ಬಗೆಯನ್ನು ವಿವರಿಸಿರಿ.

2) ಪ್ರಕೃತಿಯ ನಿಯಮವನ್ನು ಮನುಷ್ಯ ಯಾವ ರೀತಿ ಮುರಿಯುತ್ತಿದ್ದಾನೆ ಎನ್ನುವುದನ್ನು 'ನಾವು ಮತ್ತು ನಮ್ಮ ಪ್ರಕೃತಿ' ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

'ಜೀವದಲಿ ಜಾತ್ರೆ ಮುಗಿದಂತೆ' ಕತೆಯ ಆಶಯವೇನು ? ಬರೆಯಿರಿ.

3) ಮೋಹನದಾಸ ಕರಮಚಂದ ಗಾಂಧೀಯವರು ತನ್ನ ಬದುಕಿನ ಆದರ್ಶಗಳ ಮೂಲಕ ಸಮಾಜಕ್ಕೆ ನೀಡುವ ಸಂದೇಶಗಳೇನು ? ಬರೆಯಿರಿ.

**ಅಥವಾ**

ಮೋಹನದಾಸ ಕರಮಚಂದ ಗಾಂಧೀಯವರ ಬಾಲ್ಯ , ದಾಂಪತ್ಯ ಜೀವನ, ದು:ಖದ ಪ್ರಸಂಗ, ಕಳ್ಳತನ ಮತ್ತು ಪ್ರಾಯಶ್ಚಿತ್ತದ ಕ್ಷಣಗಳು 'ನನ್ನ ಸತ್ಯಾನ್ವೇಷಣೆ' ಆತ್ಮಕತೆಯಲ್ಲಿ ಹೇಗೆ ನಿರೂಪಿತವಾಗಿದೆ ? ವಿವರಿಸಿ.

II. ಕೆಳಗಿನವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಪೆಂಟಯ್ಯನ ಬದುಕಿನಲ್ಲಿ ಕಣ್ಣು ಮುಚ್ಚಾಲೆಯಾಟ ನಡೆದ ಸನ್ನಿವೇಶವು ಕವನದಲ್ಲಿ ಹೇಗೆ ಅನಾವರಣಗೊಂಡಿದೆ ?

**ಅಥವಾ**

ವಾಸಂತಿ ಅಂಬಲಪಾಡಿಯವರ 'ಮೋಂಬತ್ತಿ ಉರಿಸಿ ಕಾಯುತ್ತಿದ್ದೇವೆ' ಕವನದಲ್ಲಿ ಅಭಿವ್ಯಕ್ತವಾಗುವ ಸ್ತ್ರೀಪರ ಕಾಳಜಿಯನ್ನು ವಿವರಿಸಿ.

P.T.O.

2) ಪಂಡಿತ ಪರಂಪರೆಯ ಕೊಳಂಬೆ ಪುಟ್ಟಣಗೌಡರು 'ಅಭಿನವ ಆಂಡಯ್ಯ'ನೆಂದು ಕರೆಸಿಕೊಳ್ಳಲು ಕಾರಣ ಏನು ? ವಿವರಿಸಿ.

**ಅಥವಾ**

ನಮ್ಮ ಗೋಣಗಾಟ ಸಮರ್ಪಕ, ಅಸಮರ್ಪಕವಾದ ಎಲ್ಲಾ ವಿಷಯಗಳಿಗೂ ನಿಷ್ಪಕ್ಷಪಾತವಾಗಿ ಸಲ್ಲುತ್ತದೆ. ಈ ಹೇಳಿಕೆಯನ್ನು 'ಗೋಣಗುವ ಚಟ' ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.

3) ವಿಲಾಯಿತಿಗೆ ಪ್ರಯಾಣ ಸಿದ್ಧತೆ ಮತ್ತು ಜಾತಿ ಬಹಿಷ್ಕಾರದ ಸಂದರ್ಭದಲ್ಲಿ ಎದುರಾದ ಸವಾಲನ್ನು ಮೋಹನದಾಸ ಕರಮಚಂದ ಗಾಂಧೀಯವರು ಎದುರಿಸಿದ ಬಗೆಯನ್ನು ಕುರಿತು ಬರೆಯಿರಿ.

**ಅಥವಾ**

ಗಾಂಧೀಜಿಯವರು ಧರ್ಮಭಾವನೆಯನ್ನು ಕುರಿತು ನೀಡುವ ವ್ಯಾಪಕ ಅರ್ಥವೇನು ? ಬರೆಯಿರಿ.

III. **ಒಂದು** ಪದ್ಯಭಾಗದ ಹಿನ್ನೆಲೆ , ಸಂದರ್ಭ ಸೂಚಿಸಿ ಪದ್ಯಭಾಗವನ್ನು ವಿವರಿಸಿ ವಿಶ್ಲೇಷಿಸಿರಿ. **(1×5=5)**

ಪತಿಗಳೆನ್ನನು ಮಾರಿ ಧರ್ಮ
ಸ್ಥಿತಿಯ ಕೊಂಡರು ಭೀಷ್ಮ ಮೊದಲಾ
ದತಿರಥರು ಪರಹಿತವ ಬಿಸುಡಿಹರರ್ಥ ಭೀತಿಯಲಿ
ಸುತನ ಕಡುಸಿರಿ ಸೊಗಸಲಾ ಭೂ
ಪತಿಗೆ ಗಾಂಧಾರಿಗೆ ಯನಾಥೆಗೆ
ಗತಿಯ ಕಾಣೆನು ಶಿವ ಶಿವಾಯೆಂದೊಱಲಿದಳು ತರಳೆ

**ಅಥವಾ**

ಹೌದು ಸೋದರಿಯರೇ
ನೀವು ಬರಬೇಕು ಮತ್ತೆ ತಿರುಗಿ
ಆದ ಅನ್ಯಾಯದ ವಿರುದ್ಧ ನ್ಯಾಯ
ದೊರಕಿಸಿಕೊಳ್ಳಲು
ಹೆತ್ತವರ ನೋವ ಶಮನಿಸಲು
ಒಳಗೊಳಗೆ ಕೊರಗುವ ಮರುಗುವ
ನಾಲಗೆ ಕತ್ತರಿಸಲ್ಪಟ್ಟ ಅಬಲೆಯರ
ಕಣ್ಣೀರನೊರೆಸಲು

IV. ಕೆಳಗಿನ **ಎರಡು** ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ತಂಗಿಯಲ್ಲವೇ ಭಾನುಮತಿ ನಿನಗೆ.
2) ಆ ಕಿರಾತಕರ ರಕ್ತ ತರ್ಪಣಕ್ಕಾಗಿ.
3) ಏನು ಹಾಳು ಮಳೆಯೋ.
4) ರಾಮಬಾಣ ಹೊಕ್ಕವನು ಮಾತ್ರ ಅದರ ಶಕ್ತಿ ಅರಿಯ ಬಲ್ಲ.

V. ಅ) ಈ ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಸರ್ವಜ್ಞ
2) ಸಿದ್ಧಲಿಂಗಯ್ಯ
3) ಎಚ್. ಆರ್. ಕೃಷ್ಣಮೂರ್ತಿ
4) ಗೊಣಗುವ ಚಟ.

ಆ) ಈ ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಮೋಹನದಾಸ ಕರಮಚಂದ ಗಾಂಧಿ
2) ಪುತಲೀಬಾಯಿ
3) ಗೊರೂರು ರಾಮಸ್ವಾಮಿ ಅಯ್ಯಂಗಾರ್
4) ಗಾಂಧೀಜಿಯವರಿಗಾದ ಧರ್ಮದ ಬೆಳಕು.

VI. ಎಲ್ಲಾ ಪ್ರಶ್ನೆಗಳಿಗೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(12×1=12)**

1) 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಬಿರುದಿನ ಕವಿ ಯಾರು ?
2) ದ್ರೌಪದಿಯ ಮಾನರಕ್ಷಣೆ ಮಾಡಿದವರಾರು ?
3) 'ಸಾವಿರಾರು ನದಿಗಳು' ಇದು ಯಾರ ಕವನ ಸಂಕಲನ ?
4) ಸಿದ್ಧಯ್ಯನ ಸಾಕುಮಗಳು ಯಾರು ?
5) 'ಮೋಂಬತ್ತಿ ಉರಿಸಿ ಕಾಯುತ್ತಿದ್ದೇವೆ' ಕವನದ ಕರ್ತೃ ಯಾರು ?
6) ಕೊಳಂಬೆಯವರ ತಂದೆ–ತಾಯಿ ಯಾರು ?
7) 'ಗೊಣಗುವ ಚಟ' ಪ್ರಬಂಧದ ಕರ್ತೃ ಯಾರು ?
8) ಭಾನುಮತಿ ಯಾರು ?
9) ಸಿದ್ದಯ್ಯನ ವೃತ್ತಿಯೇನು ?
10) ಜೀವದಲಿ ಜಾತ್ರೆ ಮುಗಿದಂತೆ, ಕತೆಯ ನಾಯಕ ಯಾರು ?
11) ಶೃಂಗರಾಜ ಯಾರು ?
12) ಗಾಂಧೀಜಿಯವರ ತಾತ ಯಾರು ?